NP – 024

20

# IV Semester B.C.A. Examination, August/September 2023
## (NEP)
### ಕನ್ನಡ ಪತ್ರಿಕೆ – 4
### ಗಣಕ ಕನ್ನಡ – 4

St Claret College LIBRARY Bangalore-560013

Time : 2½ Hours Max. Marks : 60

I. **ಎರಡು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ (**200** ಪದಗಳಿಗೆ ಮೀರದಂತೆ). **(2×10=20)**

1) 'ನಾಗಣ್ಣನ ಕನ್ನಡಕ' ಕವಿತೆಯ ಸ್ವಾರಸ್ಯವನ್ನು ವಿವರಿಸಿ.

2) ಆಧುನಿಕ ಜಗತ್ತಿನ ಬದುಕಿನ ಪಲ್ಲಟಗಳನ್ನು 'ಮಣ್ಣಿನ ಮುಚ್ಚಳ' ಕತೆ ಪ್ರಸ್ತುತಪಡಿಸಿರುವ ಬಗೆ ಹೇಗೆ ? ವಿವರಿಸಿ.

3) ನಮ್ಮ ಮಾತನ್ನು ಅಕ್ಷರವಾಗಿ ಪರಿವರ್ತಿಸುವ ತಂತ್ರಾಂಶಗಳನ್ನು ಪರಿಚಯಿಸಿ.

II. **ನಾಲ್ಕು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ (**100** ಪದಗಳಿಗೆ ಮೀರದಂತೆ). **(4×5=20)**

1) ಕವಿನಪ್ಪನ ವ್ಯಕ್ತಿತ್ವವನ್ನು ಕುರಿತು ಬರೆಯಿರಿ.

2) ಕವಿತೆಯ ಆರಂಭದಲ್ಲಿ ರಾತ್ರಿಯನ್ನು ಹೇಗೆ ವರ್ಣಿಸಲಾಗಿದೆ ?

3) ಲಿಜ್ಜತ್ ಪಾಪಡ್ ಬೆಳೆದು ಬಂದ ದಾರಿಯನ್ನು ನಿರೂಪಿಸಿ.

4) ರಾಯರು ಸಂತೆಗೆ ಹೋದಾಗ ಆದ ಅನುಭವಗಳನ್ನು ಕುರಿತು ಬರೆಯಿರಿ.

5) ಆರಂಭಿಕ ವಿಜ್ಞಾನ ಸಾಹಿತ್ಯದ ಅನುವಾದಗಳ ಬಗ್ಗೆ ಬರೆಯಿರಿ.

III. ಕೆಳಕಂಡ ಕಂಡಿಕೆಯನ್ನು ಇಂಗ್ಲೀಷ್‌ಗೆ ಭಾಷಾಂತರಿಸಿ. **(1×4=4)**

ಕವಿನಪ್ಪ ನನಗೆ ಪರಿಚಿತನಿದ್ದ ವ್ಯಕ್ತಿಯೇ ಆಗಿದ್ದ. ಮುಖ್ಯ ರಸ್ತೆಯ ಪಕ್ಕದಲ್ಲಿ ಅವನ ಮನೆಯಿತ್ತು. ಮನೆ ಹಿಂದೆ ತೋಟ, ಪ್ರತಿದಿನ ಬೆಳಿಗ್ಗೆ ಸಂಜೆ ಅವನ ಮನೆ ಮುಂದೆ ನಾನು ಬೈಕಿನಲ್ಲಿ ಅಡ್ಡಾಡುತ್ತಿದ್ದೆ. ಕವಿನಪ್ಪ ಯಾವತ್ತೂ ಅವನಾಗಿ ಮಾತನಾಡಿಸಿದವನಲ್ಲ. ವಿಪರೀತ ಸಂಕೋಚದ ವ್ಯಕ್ತಿ. ಅದೂ ಅಲ್ಲದೆ ಯಾವಾಗಲೂ ಕುಡಿದಿರುತ್ತಿದ್ದ. ಮೊದಲಿಗೆ ಶ್ರೀಮಂತನಾಗಿದ್ದವ. ದಿನ ಕಳೆದಂತೆ ನಾನಾ ಕಾರಣಗಳಿಂದ ಅವನ ಸಿರಿತನ ಸವೆದುಹೋಗಿತ್ತು.

IV. ಪುಷ್ಪಾ ಎಂಬ ಕಾಲ್ಪನಿಕ ಹೆಸರಿನಲ್ಲಿ ಕಂಪನಿಯೊಂದರ ಲೆಕ್ಕಪರಿಶೋಧಕ ಹುದ್ದೆಗೆ ಅಭ್ಯರ್ಥನ ಪತ್ರ ತಯಾರಿಸಿ. **(1×4=4)**

V. ಕೆಳಕಂಡ ಚಿತ್ರ/ಸನ್ನಿವೇಶ ಆಧರಿಸಿ ಒಂದು ಕವಿತೆ/ಕತೆ ಬರೆದು ಸೂಕ್ತ ಶೀರ್ಷಿಕೆ ನೀಡಿ (**90** ಪದಗಳಿಗೆ ಮೀರದಂತೆ). **(1×4=4)**

ಅತಿವೃಷ್ಟಿಯಿಂದಾಗಿ ಬೆಳೆ ನಾಶವಾಗಿರುವುದನ್ನು ನೋಡುತ್ತಿರುವ ರೈತ.

P.T.O.

VI. ಕೆಳಕಂಡ ಗದ್ಯ ಕಂಡಿಕೆಯನ್ನು ಸಂಭಾಷಣೆಯಾಗಿ ಪರಿವರ್ತಿಸಿ, ಸೂಕ್ತ ಶೀರ್ಷಿಕೆ ನೀಡಿ. **(1×4=4)**

ರಾಯರು ಆ ಮುರಿದ ಚಾಳೀಸನ್ನು ಒಮ್ಮೆ ಮೂಗಿನ ಮೇಲೆ ಏರಿಸಿಕೊಂಡು ನೋಡಿದರು. ಏನಾಶ್ಚರ್ಯ ! ಭಗ್ನ ಇಡೀ ಬ್ರಹ್ಮಾಂಡದಲ್ಲಿ ಕೋಟಿ ಸೂರ್ಯರು ಬೆಳಗಿದ ಅನುಭವ ರಾಯರಿಗಾಯಿತು. ತಮ್ಮ ಹಳೆಯ ಯಾವ ಚಾಳೀಸಿನಲ್ಲೂ ಎಂದೂ ಇಷ್ಟೊಂದು ನಿಚ್ಚಳವಾಗಿ ಕಾಣಿಸಿರಲಿಲ್ಲ. ಕಣ್ಣೆದುರಿಗೆ ಚಾಳೀಸು ಹಿಡಿದು ಒಮ್ಮೆ ಜೋಗೇರವನ ಮುಖ ನೋಡಿದರು. ಮುಖವಷ್ಟೇ ಅಲ್ಲ, ಆ ಜೋಗೇರವನ ಅಂತರಂಗವೇ ಒಡಮೂಡಿ ಕಣ್ಣೆದುರಿಗೆ ಕಟ್ಟಿದಂತಾಯ್ತು . ರಾಯರಿಗೆ ಖುಷಿಯೋ ಖುಷಿ. ಚೌಕಾಸಿಯ ಸ್ವಭಾವದ ರಾಯರು ಮರು ಮಾತಾಡದೇ ಜೋಗೇರವನು ಹೇಳಿದ ಬೆಲೆ ಕೊಟ್ಟು ಚಾಳೀಸನ್ನು ಜೇಬಿಗೆ ಹಾಕಿಕೊಂಡು ಹೊರಟರು.

VII. ಇವುಗಳಿಗೆ **ಒಂದೊಂದು** ಸರಿ ಉತ್ತರವನ್ನು ಗುರ್ತಿಸಿ ಬರೆಯಿರಿ. **(4×1=4)**

**(ಎಲ್ಲಾ ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿ)

1) ಲೇಖಕರ ವೃತ್ತಿ ಯಾವುದು ?

ಎ) ವೈದ್ಯ

ಬಿ) ಪಶುವೈದ್ಯ

ಸಿ) ದಂತ ವೈದ್ಯ

ಡಿ) ಪಶುಪಾಲಕ

2) ಮಿಂಚು-ಗುಡುಗುಗಳ ನಡುವೆ ಮರೆಯಾಗಿ ಹೋದವರು ಯಾರು ?

ಎ) ಬೋದಿಲೇರ್

ಬಿ) ಲಂಕೇಶ್

ಸಿ) ಡಿ. ಆರ್. ಎನ್.

ಡಿ) ಡಾಂಟೆ

3) ರಾಯರಿಗೆ ಮುರಿದ ಚಾಳೀಸನ್ನು ಮಾರಿದವರು ಯಾರು ?

ಎ) ಎಲ್ಲವ್ವ

ಬಿ) ರಂಗನಾಥ

ಸಿ) ಹರಿಣಾಬಾಯಿ

ಡಿ) ಜೋಗೇರವ

4) 'ಅಕೇಷಿಯಾ ಅರೇಬಿಕ' ಮರ ಯಾವುದು ?

ಎ) ಕರಿಜಾಲಿ ಮರ

ಬಿ) ನೀಲಗಿರಿ ಮರ

ಸಿ) ಮಾವಿನ ಮರ

ಡಿ) ಬಿದಿರು